Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 12/2025

ಪ್ರಾ.ಸಾ. 1 ಚಾ.ಸಾ 1

| | | |
|---|---|---|
| ಹೆಸರು | : | ಗೊವಿಂದಮ್ಮ |
| ಗಂಡನ ಹೆಸರು | : | ಮಹಾಲಿಂಗಪ್ಪ ನಾಯಕವಾಡಿ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ | : | ಕಾಕಲವಾರ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 18-10-2025
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಮೃತನ ನರೇಂದ್ರ ನನ್ನ ಮಗನಾಗಿರುತ್ತಾನೆ. ನನಗೆ ಚಾಸಾ-18, 21, 23, 25, 27 ರವರ ಪರಿಚಯ ಇರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತನ ಪರಿಚಯ ಇರುತ್ತದೆ. ನಮ್ಮ ಭಾವನ ಕಡೆಯಿಂದ ಆರೋಪಿ ಪರಿಚಯ ಆಗಿದ್ದು ಆಗಾಗ ನಮ್ಮ ಮನೆಗೆ ಬರುತ್ತಿದ್ದರಿಂದ ಆರೋಪಿಯ ಪರಿಚಯ ಇರುತ್ತದೆ. ಈಗ 1 ವರ್ಷದ ಹಿಂದೆ ಸಂಜೆ 5.00 ಗಂಟೆ ಕಾಕಲವಾರ ಗ್ರಾಮದಲ್ಲಿ ನನ್ನ ಮಗ ಶಾಲೆಗೆ ಹೋಗಿ ಬರುತ್ತಿದ್ದ. ನನ್ನ ಮಗ ನನ್ನ ಗಂಡನ ತಂಗಿಯ ಮನೆಗೆ ಚಪ್ಪಲಿ ಹಾಕಿಕೊಂಡು ಬರಲು ಹೋಗಿದ್ದನು. ನಂತರ ನಮ್ಮ ಮಗ ಮನೆಗೆ ಬಂದಿರುವುದಿಲ್ಲ. ಏನಾಗಿತ್ತು ಎಂದು ನನ್ನ ಮಗನ್ನು ಹುಡುಕಲು ಪ್ರಯತ್ನಿಸಿರುತ್ತೇವೆ. ಹನುಮಾನ ದೇವರ ಗುಡಿಯಿಂದ ನನ್ನ ಮಗ ಕಾಣೆಯಾದ ಬಗ್ಗೆ ಪ್ರಚಾರ ಮಾಡಿದರು. ರಾತ್ರಿ 8.00 ಗಂಟೆಗೆ ನನ್ನ ಮಗ ಕಾಕಲವಾರ ಗ್ರಾಮದ ಚಾಸಾ-27 ಸದಾಶಿವರಡ್ಡಿ ಮನೆಯಲ್ಲಿ ಎತ್ತು ಕಟ್ಟುವ ಕೊಣೆಯಲ್ಲಿ

ಇರುತ್ತಾನೆ ಎಂದು ಗೊತ್ತಾಯಿತು. ನನ್ನ ಮಗನ ಜೊತೆ ಅಬ್ದುಲ ನಬಿಸಾಬ ಅಂದರೆ ನ್ಯಾಯಾಲಯದ ಮುಂದೆ ಇರುವ ಆರೋಪಿ ಇದ್ದನ್ನು ಎಂದು ಗೊತ್ತಾಯಿತು. ಈ ಇಬ್ಬರೂ ಹೋಗುವುದನ್ನು ಚಾಸಾ-25 ದೇವಿಂದ್ರಮ್ಮ, ಚಾಸಾ-19 ಮಾಣಿಕ್ಯಮ್ಮ, ಚಾಸಾ-23 ರಾಜು ರವರು ಸಹ ನೋಡಿರುತ್ತಾರೆ. ನನ್ನ ಮಗನು ಚಾಸಾ-27 ರವರ ಮನೆಯ ದನಗಳು ಕಟ್ಟುವ ಕೊಟ್ಟಿಗೆಯಲ್ಲಿ ಸತ್ತಿರುತ್ತಾನೆ ಎಂದು ಗೊತ್ತಾಯಿತು. ಸತ್ತನೆಂದು ಗೊತ್ತಾದ ಮೇಲೆ ಪೊಲೀಸರಿಗೆ ನಾನು ಸಂಶಸೆಯದ ದೂರು ಕೊಟ್ಟಿರುತ್ತೇನೆ. ಸದರಿ ದೂರನ್ನು ಈಗ **ನಿ.ಪಿ.1** ಎಂದು ಗುರುತಿಸಲಾಯಿತು. ತದನಂತರ ಚಾಸಾ-21 ಯಲ್ಲಪ್ಪ ಈತನು ನನ್ನ ಮಗನ್ನು ಆರೋಪಿ ಅಬ್ದುಲ ನಬಿ ಇವರು ಚಾಸಾ-27 ಸದಾಶಿವರೆಡ್ಡಿ ರವರ ಮನೆಗೆ ಕರೆದುಕೊಂಡು ಹೋಗಿ ಕೊಂದು ಹಾಕಿರುತ್ತಾನೆ ಎಂದು ತಿಳಿಸಿರುತ್ತಾನೆ. ನನ್ನ ಮಗನ ಮೂಗು ಮತ್ತು ಬಾಯಿ ಒತ್ತಿ ಹಿಡಿದು ಆರೋಪಿ ಕೊಲೆ ಮಾಡಿರುತ್ತಾನೆ ಎಂದು ಚಾಸಾ-21 ಇವರು ತಿಳಿಸಿದ ಮೇರೆಗೆ ಪುನಃ ನಾನು ಹೋಗಿ ದೂರು ಕೊಟ್ಟಿರುತ್ತೇನೆ. ಈ ವಿಷಯ ಗೊತ್ತಾದ ಮೇಲೆ ಪೊಲೀಸ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ದೂರನ್ನು ಈಗ ತೋರಿಸಿಸುತ್ತಿದ್ದು ಅದನ್ನು **ನಿ.ಪಿ.2** ಎಂದು ಗುರುತಿಸಲಾಯಿತು. ನಿ.ಪಿ.2 ನ್ನು ಚಾಸಾ-30 ಇವರು ಬರೆದಿರುತ್ತಾರೆ. ನಾನು ಹೇಳಿದಂತೆ ಚಾಸಾ-30 ಮಹೇಶ ಮೊಕಾಶೆ ಬರೆದ ಓದಿ ಹೇಳಿದ ನಾನು ಹೆಬ್ಬಟ್ಟಿನ ಗುರುತು ಹಾಕಿರುತ್ತೇನೆ. ಅಲ್ಲಿಂದ ನನ್ನಮಗನ ಮೃತ ದೇಹವನ್ನು ಯಾದಗಿರಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಯಾದಗಿರಿ ಸರಕಾರಿ ಆಸ್ಪತ್ರೆಯಲ್ಲಿ ಪಿ.ಎಮ್, ಮಾಡಿರತ್ತಾರೆ. ಸಾಕ್ಷಿದಾರರಿಗೆ ಒಟ್ಟು 8 ಭಾವಚಿತ್ರಗಳನ್ನುತೋರಿಸಿದ್ದು ಅವುಗಳನ್ನು ಅನುಕ್ರವಾಗಿ **ನಿ.ಪಿ.3 ರಿಂದ 10** ಎಂದು ಗುರುತಿಸಲಾಯಿತು. ಸಾಕ್ಷಿದಾರರು ಭಾವಚಿತ್ರವನ್ನು ನೋಡಿ ಗುರುಮಠಕಲ್ ಆಸ್ಪತ್ರೆ ಎಂದು ಹೇಳಿರುತ್ತಾರೆ.

2. ಕಾಕಲವಾರ ಗ್ರಾಮದ ಚಾಸಾ-27 ಸದಾಶಿವರೆಡ್ಡಿ ರವರ ಮನೆಯ ದನದ ಕೊಟ್ಟಿಗೆಯಲ್ಲಿ ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಶವಪಂಚನಾಮೆಯನ್ನು ಮಾಡಿರುತ್ತಾರೆ. ಬೆಳಿಗ್ಗೆ 10.00-12.00 ಗಂಟೆ ಸುಮಾರು ಪಂಚನಾಮೆಯನ್ನು ಮಾಡಿರುತ್ತಾರೆ. ಮೃತ ದೇಹ ಬಿದ್ದ ಪಂಚನಾಮೆಯನ್ನು **ನಿ.ಪಿ.11**

ಎಂದು ಗುರುತಿಸಲಾಯಿತು. ನನ್ನ ಸಮಕ್ಷಮದಲ್ಲಿ ಕಚ್ಚಾನಕಾಶೆಯನ್ನು ತಯಾರಿಸಿರುತ್ತಾರೆ ಅದನ್ನು **ನಿ.ಪಿ.12** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಒಟ್ಟು 8 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು **ನಿ.ಪಿ.13 ರಿಂದ 20** ಎಂದು ಗುರುತಿಸಲಾಯಿತು.

3. ಇನ್ನಿಬ್ಬರ ಪಂಚರ ಸಮಕ್ಷಮ ಚಾಸಾ-27 ಸದಾಶಿವರೆಡ್ಡಿ ರವರ ಮನೆಯ ದನದ ಕೊಟ್ಟಿಗೆಯಲ್ಲಿ ಪಂಚನಾಮೆ ಮಾಡಿದ್ದು, ಬೆಳಿಗ್ಗೆ 10.00-11.00 ಗಂಟೆ ಸುಮಾರು ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು **ನಿ.ಪಿ.21** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತಯಾರಿಸಿದ ಕಚ್ಚಾನಕಾಶೆಯನ್ನು ತಯಾರಿಸಿರುತ್ತಾರೆ ಅದನ್ನು **ನಿ.ಪಿ.22** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ನೋಡಿ ಗುರುತಿಸಿದ್ದು ಅವುಗಳನ್ನು **ನಿ.ಪಿ.23 ರಿಂದ 30** ಎಂದು ಗುರುತಿಸಲಾಯಿತು. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಆರೋಪಿಯು ನನ್ನ ಮಗನನ್ನು ಕೊಲೆ ಮಾಡಿದವನು ಎಂದು ಗುರುತಿಸಿರುತ್ತಾರೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಸ್.ಎಸ್.ಪಿ. ವಕೀಲರಿಂದ

- ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದು ರೂ. 300/- ರೊಂದಿಗೆ ಅನುಮತಿಸಲಾಯಿತು.

ಮರುವಿಚಾರಣೆ:-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 12/2025

ಪ್ರಾ.ಸಾ. 2 ಚಾ.ಸಾ 2

| | | |
|---|---|---|
| ಹೆಸರು | : | ಸಾಬಣ್ಣ |
| ತಂದೆಯ ಹೆಸರು | : | ಆಶಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಖಾಸಗಿ ನೌಕರಿ |
| ವಾಸ | : | ಕಾಕಲವಾರ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 18-10-2025

ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-1, 3 ರವರು ಮತ್ತು ಆಕೆಯ ಮೃತ ನರೇಂದ್ರನ ಪರಿಚಯ ಇತ್ತು. ದಿಃ 01.10.2024 ರಂದು ಸುಮಾರು ಬೆಳಿಗ್ಗೆ 8.00 ಗಂಟೆಗೆ ಗುರುಮಠಕಲ್ ಸರಕಾರಿ ಆಸ್ಪತ್ರೆಯ ಶವಗಾರ ಕೋಣೆಯಲ್ಲಿ ಕರೆಸಿದರು. ನಮ್ಮ ಎದುರಿಗೆ ಮೃತ ನರೇಂದ್ರನ ಶವಪಂಚನಾಮೆಯನ್ನು ಮಾಡಿರುತ್ತಾರೆ. ನರೇಂದ್ರನ ಕೊಲೆ ಮಾಡಿದ ವಿಚಾರವಾಗಿ ಶವಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿಗೆ ಈಗ ಶವಪಂಚನಾಮೆಯನ್ನು ತೋರಿಸಿದ್ದು ಅದನ್ನುನೋಡಿ ಗುರುತಿಸಿದ್ದು ಅದನ್ನು **ನಿ.ಪಿ.31** ಅದಕ್ಕೆ ಇರುವ ಸಾಕ್ಷಿದಾರರ ಸಹಿಯನ್ನು **ನಿ.ಪಿ.31(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಒಟ್ಟು ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ.3 ರಿಂದ 10 ಎಂದು ಗುರುತಿಸಲಾಗಿದೆ.

ನಿ.ಪಿ.3 ರಿಂದ 10 ರಲ್ಲಿ ನಾನು ಮತ್ತು ಚಾಸಾ-3 ರಮೇಶ ಹಾಗೂ ಚಾಸಾ-1 ಗೋವಿಂದಮ್ಮ ರವರು ಇರುತ್ತೇವೆ. ನಿ.ಪಿ.31 ನ್ನು ನನಗೆ ಓದಿ ಹೇಳಿದ ಮೇಲೆ ಸಹಿ ಮಾಡಿರುತ್ತೇನೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಸ್.ಎಸ್.ಪಿ. ವಕೀಲರಿಂದ

- ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದು ಅನುಮತಿಸಲಾಯಿತು.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.